**ಪಾಠ-6** **ಏಪ್ರಿಲ್ 30– ಮೇ 6**

# ಅಬ್ರಹಾಮನ ಮೂಲ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 12, ಯೆಶಾಯ 48:20, ಯೆಶಾಯ 36:6,9, ಯೆರೆ 2:18, ಆ.ಕಾಂಡ 13, ಆ.ಕಾಂಡ 14, ಇಬ್ರಿಯ 7:1–10.

**ಸ್ಮರಣವಾಕ್ಯ : "ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟಕೂಡಲೇ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟುಹೋದನು. ತಾನು ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ಹೊರಟನು"** (ಇಬ್ರಿಯ 11:8).

ನಾವು ಈವಾಗ ಆದಿಕಾಂಡ ಪುಸ್ತಕದ ಮಧ್ಯಭಾಗ (ಕೇಂದ್ರಭಾಗ) ತಲುಪಿದ್ದೇವೆ. ಈ ಮಧ್ಯಭಾಗವನ್ನು (ಆದಿಕಾಂಡ 12 ರಿಂದ 22ನೇ ಅಧ್ಯಾಯದವರೆಗೆ) ಅಬ್ರಹಾಮನ ಪ್ರಯಾಣ ಆವರಿಸಿಕೊಂಡಿದೆ. ದೇವರು ಅಬ್ರಹಾಮನಿಗೆ "ನೀನು ಹೊರಟುಹೋಗು" ಎಂದು ಪ್ರಥಮವಾಗಿ ಕರೆಕೊಟ್ಟಾಗ (ಆ.ಕಾಂಡ 12:1) ಅದು ಆತನು ತನ್ನ ಹಿಂದಿನದನ್ನೆಲ್ಲಾ ತೊರೆಯುವಂತೆ ಮಾಡಿತು ಮತ್ತು ಎರಡನೆಯ ಕರೆಕೊಟ್ಟಾಗ ಅದು ಆತನು ತನ್ನ ಭವಿಷ್ಯವನ್ನು ತೊರೆಯುವಂತೆ ಮಾಡಿತು (ಭವಿಷ್ಯವು ಆತನ ಮಗನಲ್ಲಿ ಆಧಾರಗೊಂಡಿತ್ತು). ಅದರ ದೆಸೆಯಿಂದ ಅಬ್ರಹಾಮನು ಯಾವಾಗಲೂ ಸಂಚರಿಸುತ್ತಿದ್ದನು, ಯಾವಾಗಲೂ ವಲಸಿಗನಾಗಿದ್ದನು ಎಂತಲೇ ಆತನನ್ನು 'ಅನ್ಯದೇಶೀಯನು" ಎಂದು ಕರೆಯುತ್ತಿದ್ದರು (ಆ.ಕಾಂಡ 17:8).

* **ಈ ವಾರದ ಪಾಠವನ್ನು ಮೇ 7ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಅಬ್ರಹಾಮನು ಪ್ರಯಾಣ ಮಾಡುತ್ತಾ ತನ್ನ ಹಿಂದಿನದನ್ನೆಲ್ಲಾ ಕಳೆದುಕೊಂಡನು. ಹಾಗೆಯೇ ತನ್ನ ಮುಂದಿನದನ್ನು ಸಹಾ ಕಾಣಲಾರದೆ ಶೂನ್ಯತೆಯಲ್ಲಿ ತೂಗು ಹಾಕಲ್ಪಟ್ಟನು. ಆತನಿಗೆ ಕೊಟ್ಟ ದೇವರ ಎರಡು ಕರೆಗಳ ನಡುವೆ ಆತನ ನಂಬಿಕೆಯ ಪ್ರಯಾಣ ರೂಪಿತವಾಗಿದೆ, "ಅಬ್ರಹಾಮನೇ ಭಯಪಡಬೇಡ" ಎಂಬ ದೇವರ ಸ್ವರವನ್ನು ಕೇಳಿಸಿಕೊಂಡವನು, ಕೇಳಿ ಭರವಸಗೊಂಡನು (ಆ.ಕಾಂಡ 15:1). ದೇವರ ಈ ಮಾತುಗಳು ಅಬ್ರಹಾಮನ ಪ್ರಯಾಣದ ಮೂರು ವಿಭಾಗಗಳನ್ನು ಗುರುತು ಮಾಡುತ್ತದೆ. ಇವುಗಳನ್ನು ಆರು, ಏಳು ಮತ್ತು ಎಂಟನೆ ಪಾಠಗಳಲ್ಲಿ ಕಲಿಯುತ್ತೇವೆ.

ಅಬ್ರಹಾಮನು ನಂಬಿಕೆಗೆ ಉದಾಹರಣೆಯಾಗಿದ್ದಾನೆ (ಆ.ಕಾಂಡ 15:6) ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನಂಬಿಕೆಯ ಮನುಷ್ಯನೆಂದು ಸ್ಮರಿಸಲ್ಪಡುತ್ತಾನೆ (ನೆಹೆಮೀಯ 9:7,8). ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಸಲ ಪ್ರಸ್ತಾಪವಾಗಿರುವ ಹಳೆಯ ಒಡಂಬಡಿಕೆ ವ್ಯಕ್ತಿಗಳಲ್ಲಿ ಅಬ್ರಹಾಮನು ಮುಖ್ಯನಾಗಿದ್ದಾನೆ. ಈ ಪಾಠದಲ್ಲಿ ಆತನ ಬಗ್ಗೆ ಹೆಚ್ಚಾಗಿ ಕಲಿಯುತ್ತೇವೆ.

**ಭಾನುವಾರ** **ಮೇ 1**

## ಅಬ್ರಾಮನ ಹೊರಡುವಿಕೆ

ಆದಿಕಾಂಡ 12:1–9 ವಚನಗಳನ್ನು ಓದಿರಿ. ದೇವರು ಅಬ್ರಾಮನಿಗೆ ತನ್ನ ಕುಟುಂಬ ಮತ್ತು ದೇಶವನ್ನು ಬಿಟ್ಟು ಬರುವಂತೆ ಕರೆಯುತ್ತಾನೆ ಏಕೆ? ಅದಕ್ಕೆ ಅಬ್ರಾಮನು ಹೇಗೆ ಪ್ರತಿಕ್ರಿಯೆ ಕೊಟ್ಟನು?

ಕಳೆದ ಪಾಠದಲ್ಲಿ ಸತ್ಯವೇದವು ದಾಖಲಿಸಿರುವಂತೆ ದೇವರು ವ್ಯಕ್ತಿಯೊಬ್ಬನ ಜೊತೆ ಮಾತಾಡಿದ್ದನು. ಎಲ್ಲಾ ಜೀವಿಗಳ ಸಂಗಡ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇನೆಂದು ಜಲಪ್ರಳಯದ ನಂತರ ಮತ್ತೆ ಭೂಮಿಯನ್ನು ಹಾಳು ಮಾಡುವ ಜಲಪ್ರಳಯವು ಬರುವುದೇ ಇಲ್ಲ ಎಂದು ಭರವಸೆ ತುಂಬಲು ದೇವರು ಮಾತಾಡಿದ್ದ ಆ ವ್ಯಕ್ತಿ ನೋಹನೇ ಆಗಿದ್ದನು (ಆ.ಕಾಂಡ 9:15–17).

ಈವಾಗ ದೇವರು ಅಬ್ರಾಮನಿಗೆ ನಿನ್ನಿಂದ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು ಎಂದು ಹೇಳಿದ ಹೊಸ ಮಾತು ವಾಗ್ದಾನದ ಜೊತೆಗೆ ಮತ್ತೆ ಬೆಸೆಯುತ್ತದೆ.

ಹಿಂದಿನದನ್ನು ಬಿಡುವುದರೊಂದಿಗೆ ಪ್ರವಾದನೆಯ ನೆರವೇರಿಕೆಯು ಆರಂಭವಾಗುತ್ತದೆ. ಅಬ್ರಾಮನು ತನಗೆ ಪರಿಚಿತವಾದದ್ದನ್ನೆಲ್ಲಾ ಬಿಡುತ್ತಾನೆ. ತನ್ನ ದೇಶ, ಕುಟುಂಬ ಕಡೆಗೆ ತನ್ನ ಬದುಕಿನ ಭಾಗವನ್ನೇ ತಾನು ಬಿಡುತ್ತಾನೆ. ಈ ಸಂದರ್ಭದಲ್ಲಿ "ಹೊರಟು ಹೋಗು" ಎಂಬ ಪ್ರಧಾನ ಪದವು ಏಳು ಸಲ ಪುನರಾವರ್ತನೆಗೊಂಡಿರುವುದು ಹೊರಟು ಹೋಗುವುದರ ತೀವ್ರತೆಯನ್ನು ಪ್ರತಿಬಿಂಬಿಸುತ್ತದೆ. ಅಬ್ರಾಮನು ಮೊದಲಿಗೆ ತನ್ನ ತಂದೆಯೊಡನೆ ಜೀವಿಸುತ್ತಿದ್ದ ಕಲ್ದೀಯರ ದೇಶದ ಊರ್ ಎಂಬ ಸ್ಥಳವನ್ನು ಬಿಡಬೇಕಾಗಿತ್ತು. ಇದು ಬ್ಯಾಬಿಲೋನಿಯವಾಗಿತ್ತು (ಆ.ಕಾಂಡ 11:31, ಯೆಶಾಯ 13:19). ಬಾಬೆಲನ್ನು ಬಿಟ್ಟು ಹೊರಟು ಬನ್ನಿ ಎಂದು ಸತ್ಯವೇದದ ಪ್ರವಾದಿಗಳು ಕೊಡುವ ಕರೆಗೆ ದೀರ್ಘ ಇತಿಹಾಸವಿದೆ (ಯೆಶಾಯ 48:20, ಪ್ರಕ 18:4).

ಅಬ್ರಾಮನ ನಿರ್ಗಮನ (ಹೊರಡುವಿಕೆ) ಆತನ ಕುಟುಂಬವನ್ನು ಸಹಾ ಒಳಗೊಂಡಿದೆ. ಅಬ್ರಾಮನು ತನ್ನ ಪರಂಪರೆಯನ್ನು ಮತ್ತು ತಾನು ಅನುವಂಶೀಯವಾಗಿ ಏನನ್ನು ಸಂಪಾದಿಸಿದ್ದನೋ, ಕಲಿತಿದ್ದನೋ ಅದನ್ನೆಲ್ಲಾ ಬಿಡಬೇಕಾಗಿತ್ತು.

ಆದಾಗ್ಯೂ, ಹೊರಟುಹೋಗು ಎಂಬ ದೇವರ ಕರೆ ಅದಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿದೆ. ಇಬ್ರಿಯ ಪದಗಟ್ಟು 'ಲೇಖ್ ಲೇಖಾ' – 'ಹೊರಟು ಹೋಗು' ಎಂಬುದು ನಿನ್ನಷ್ಟಕ್ಕೆ ನೀನೆ ಅಥವಾ ನಿನಗೋಸ್ಕರ ಹೋಗು ಎಂಬುದಾಗಿ ಅರ್ಥ ಕೊಡುತ್ತದೆ. ಅಬ್ರಾಮನು ಬ್ಯಾಬಿಲೋನಿಯ ಬಿಟ್ಟು ಹೊರಟು ಹೋದದ್ದು ಅದರ ಪರಿಸರ ಅಥವಾ ಅವನ ಕುಟುಂಬಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿದೆ (ಹೆಚ್ಚಿನದಕ್ಕೆ ಸಂಬಂಧಿಸಿದೆ).

ಇಬ್ರಿಯ ಪದಗಟ್ಟು ತನ್ನತನಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತದೆ. ಅಬ್ರಾಮನು 'ತನ್ನತನವನ್ನೇ' ಬಿಡಬೇಕಾಗಿತ್ತು. ಬ್ಯಾಬಿಲೋನಿನಲ್ಲಿ ಹೊಂದಿದ್ದ ತನ್ನ ಹಿಂದಿನ ಭಾಗವಾಗಿದ್ದ ತನ್ನತನವನ್ನೇ ಬಿಟ್ಟುಬರಬೇಕಾಗಿತ್ತು.

ಈ ಪರಿತ್ಯಾಗದ ಮುಂದಿನ ಗುರಿ ದೇವರು ತೋರಿಸುವ ಒಂದು ದೇಶವಾಗಿತ್ತು. ಇಸಾಕನ ಬಲಿಯರ್ಪಣೆಯ ಸಂದರ್ಭದಲ್ಲೂ ಸಹಾ ಇದೇ ತೆರನಾದ ಭಾಷೆಯನ್ನು

ಉಪಯೋಗಿಸಲಾಗಿದೆ (ಆ.ಕಾಂಡ 22:2). ಇದು ಇಸಾಕನು ಬಲಿಯಾಗಿ ಅರ್ಪಿತನಾಗಬೇಕಿದ್ದ ಮತ್ತು ಯೆರೂಸಲೇಮು ಕಟ್ಟಲ್ಪಡಬೇಕಾಗಿದ್ದ ಮೊರಿಯಾ ಬೆಟ್ಟವನ್ನು ಕುರಿತು ಹೇಳುತ್ತದೆ (2 ಪೂ.ವೃ.3:1). ದೇವರ ವಾಗ್ದಾನವು ಕೇವಲ ವಾಸಸ್ಥಳದ ಬಗ್ಗೆ ಹೇಳುವುದಿಲ್ಲ. ಆದರೆ ಲೋಕದ ರಕ್ಷಣೆಯ ಬಗ್ಗೆ ಹೇಳುತ್ತದೆ. ಈ ಒಂದು ಆಲೋಚನೆಯು ದೇವರು ಭೂಲೋಕದ ಎಲ್ಲಾ ಕುಲದವರನ್ನು ಆಶೀರ್ವಾದಿಸುತ್ತಾನೆ ಎಂಬ ವಾಗ್ದಾನದ ಪುನರ್ ದೃಢೀಕರಣವಾಗಿದೆ (ಆ.ಕಾಂಡ 12:2,3). ಈ ವಚನಗಳಲ್ಲಿ 'ಬಾರಾಖ್' ಆಶೀರ್ವದಿಸು ಎಂಬ ಕ್ರಿಯಾಪದ ಐದುಸಲ ಕಾಣಿಸಿಕೊಂಡಿದೆ. ಭೂಲೋಕದ ಎಲ್ಲಾ ಕುಲದವರಿಗೆ ಉಂಟಾಗುವ ಸಾರ್ವತ್ರಿಕ ಆಶೀರ್ವಾದವು ಅಬ್ರಾಮನ ಸಂತತಿಯ ಮೂಲಕ ಬರುವಂಥದ್ದಾಗಿದೆ (ಆ.ಕಾಂಡ 22:18, ಆ.ಕಾಂಡ 26:4, ಆ.ಕಾಂಡ 28:14). ವಚನದಲ್ಲಿ ಉಲ್ಲೇಖವಾಗಿರುವ 'ಸಂತತಿ' ಎಂಬುದು ಅಂತಿಮವಾಗಿ ಕ್ರಿಸ್ತಯೇಸುವಿನಲ್ಲಿ ನೆರವೇರುತ್ತದೆ (ಅ.ಕೃ. 3:25).

ನೀವು ಯಾವುದನ್ನು ಬಿಡಬೇಕಾಗಿದೆ ಎಂದು ದೇವರು ಕರೆಕೊಡುತ್ತಿದ್ದಾನೆ? ಹಾಗೆಂದರೆ ದೇವರ ಕರೆಗೆ ಓಗೊಟ್ಟು ನೀವು ನಿಮ್ಮ ಜೀವಿತದ ಯಾವ ಭಾಗವನ್ನು ಪರಿತ್ಯಜಿಸಬೇಕಾಗಿದೆ?

**ಸೋಮವಾರ** **ಮೇ 2**

## ಐಗುಪ್ತದ ಶೋಧನೆ

ಆದಿಕಾಂಡ 12:10–20 ವಚನಗಳನ್ನು ಓದಿರಿ. ಅಬ್ರಾಮನು ವಾಗ್ದತ್ತ ದೇಶವನ್ನು ಬಿಟ್ಟು ಐಗುಪ್ತಕ್ಕೆ ಏಕೆ ಹೋದನು? ಅಬ್ರಾಮನಿಗೆ ಹೋಲಿಸಿದರೆ ಫರೋಹನು ಹೇಗೆ ವರ್ತಿಸಿದನು?

ವ್ಯಂಗವಾಗಿ ಹೇಳುವುದಾದರೆ ಅಬ್ರಾಮನು ಆಗತಾನೆ ವಾಗ್ದತ್ತ ದೇಶಕ್ಕೆ ಬಂದು ತಲುಪಿದ್ದನು. ಆದರೆ ಅಲ್ಲಿ ಬರದಿದ್ದುದರಿಂದ ಐಗುಪ್ತ ದೇಶಕ್ಕೆ ಹೋಗಬೇಕೆಂದು ನಿರ್ಧರಿಸಿದನು (ಆ.ಕಾಂಡ 12:10). ಬರಗಾಲದಲ್ಲಿ ಕಾನಾನ್ ದೇಶದ ಜನರು ಐಗುಪ್ತ ದೇಶಕ್ಕೆ ಹೋಗುತ್ತಿದ್ದರು ಎಂಬುದಕ್ಕೆ ಪುರಾತನ ಐಗುಪ್ತ ಬರಹಗಳು ದೃಢೀಕರಿಸುತ್ತವೆ.

ಐಗುಪ್ತದ ಬೋಧನೆಯಲ್ಲಿ ಸುಮಾರು ಕ್ರಿ.ಪೂ.2060–1700ರಲ್ಲಿ ಒಂದು ವಚನವು ರಚನೆಗೊಂಡಿದೆ, ಅದರ ಪ್ರಕಾರ ಕಾನಾನ್ ದೇಶದ ಜನರನ್ನು ಗತಿಗೆಟ್ಟ ಏಷ್ಯಾದ ಮನುಷ್ಯರೆಂದು ಗುರುತಿಸಲಾಗುತ್ತದೆ. ನೀರಿನ ಕೊರತೆಯಿಂದ ನಿಂತ ಕಡೆನಿಲ್ಲದೆ ಆಹಾರ ಸಿಗುವ ಕಡೆಗೆ ನಡೆದುಕೊಂಡು ಹೋಗುವ ದುರವಸ್ಥೆಯಲ್ಲಿ ಬಿದ್ದವರು ಎಂದು ಬಣ್ಣಿಸಬಹುದು– *Ancient Egyptian Literature* 1ನೇ ಸಂಪುಟ, *The old and middle kingdoms* ಪುಟ 103, 104.

ಪುರಾತನ ಇಸ್ರಾಯೇಲ್ಯರಿಗೆ ಐಗುಪ್ತದಿಂದ ಬರುತ್ತಿದ್ದ ಶೋಧನೆಗಳು ಸಮಸ್ಯೆಗಳಾಗಿದ್ದವು (ಅರಣ್ಯಕಾಂಡ 14:3, ಯೆರೆಮೀಯ 2:18). ಹಾಗಾಗಿ ಐಗುಪ್ತವು ಮನುಷ್ಯರು ದೇವರ ಮೇಲೆ ಭರವಸವಿಡದೆ ಮನುಷ್ಯರು ಮನುಷ್ಯರ ಮೇಲೆ ಭರವಸವಿಡುವುದಕ್ಕೆ ಒಂದು ಸಂಕೇತವಾಗಿ ಹೋಗಿದೆ (2 ಅರಸು 18:21, ಯೆಶಾಯ 36:6,9). ಐಗುಪ್ತದಲ್ಲಿ ಪ್ರತಿದಿನವೂ ನೀರನ್ನು ಕಾಣಬಹುದಾಗಿತ್ತು. ಹಾಗಾಗಿ ನಂಬಿಕೆಯ ಅಗತ್ಯವೇ ಇರಲಿಲ್ಲ. ಯಾಕೆಂದರೆ ಆ ದೇಶಕ್ಕೆ ಕೊಡಲ್ಪಟ್ಟ ವಾಗ್ದಾನವನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿತ್ತು. ಬರಪೀಡಿತ ದೇಶಕ್ಕೆ ಹೋಲಿಸಿಕೊಂಡರೆ ದೇವರು ಅಬ್ರಾಮನಿಗೆ ಹೇಳಿದ್ದುದಕ್ಕೆ ಹೊರತಾಗಿ ಐಗುಪ್ತವು ವಾಸಿಸುವುದಕ್ಕೆ ಬಹಳ ಒಳ್ಳೆಯ ದೇಶವಾಗಿತ್ತು.

ಈವಾಗ ಕಾನಾನ್ ದೇಶವನ್ನು ಬಿಟ್ಟು ಹೋಗುತ್ತಿದ್ದ ಅಬ್ರಾಮನು, ಊರ್ ಎಂಬ ಸ್ಥಳವನ್ನು ಬಿಟ್ಟು ಬಂದ ಅಬ್ರಾಮನಿಗಿಂತ ಭಿನ್ನವಾಗಿ ಕಾಣುತ್ತಿದ್ದನು. ದೇವರು ಕರೆದನು ಎಂಬ ಕಾರಣಕ್ಕೆ ಊರ್ ಎಂಬ ತನ್ನ ಸ್ಥಳವನ್ನು ಬಿಟ್ಟು ಬಂದ ಅಬ್ರಾಮನನ್ನು ನಂಬಿಕೆಯ ಮನುಷ್ಯನನ್ನಾಗಿ ಚಿತ್ರಿಸಲಾಗಿತ್ತು. ಆದರೆ ಈವಾಗ ಅಬ್ರಾಮನು ತನ್ನ ಇಚ್ಛೆಯ ಮೇರೆಗೆ ವಾಗ್ದತ್ತ ದೇಶವನ್ನು ಬಿಟ್ಟು ಹೋಗುತ್ತಿದ್ದಾನೆ. ಮೊದಲು ಅಬ್ರಾಮನು ದೇವರ ಮೇಲೆ ಭರವಸೆ ಇಟ್ಟವನಾಗಿದ್ದನು. ಈಗಲಾದರೋ ಆತನು ನೀತಿಗೆಟ್ಟ ರಾಜಕಾರಣಿಯಂತೆ ವರ್ತಿಸುತ್ತಿದ್ದಾನೆ. "ಅಬ್ರಾಮನು ಐಗುಪ್ತ ದೇಶದಲ್ಲಿ ವಾಸವಾಗಿದ್ದಾಗ ತಾನೂ ಕೂಡ ಬಲಹೀನ ಮನುಷ್ಯನು ದೋಷವುಳ್ಳವನು ಎಂಬುದಕ್ಕೆ ಪುರಾವೆ ಕೊಟ್ಟಿದ್ದನು. ತನ್ನ ಜೀವಿತಕಾಲದಲ್ಲೆಲ್ಲಾ ನಂಬಿಕೆಗೆ ಉದಾಹರಣೆಯಾಗಿದ್ದವನು ಸಾರಳು ತನ್ನ ಹೆಂಡತಿ ಎಂಬ ನಿಜಸಂಗತಿಯನ್ನು ಬಚ್ಚಿಟ್ಟು ದೈವೀಕ ಆಸರೆಯನ್ನು ತಾತ್ಸಾರ ಮಾಡಿದನು"

(ದ್ರೋಹ ಬಗೆದನು). ಶ್ರೀಮತಿ ವೈಟಮ್ಮನವರ 'ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ 130ನೇ ಪುಟ.

ಇಲ್ಲಿ ನಾವು ಏನನ್ನು ನೋಡುತ್ತೇವೆ ಎಂದರೆ ದೇವರಲ್ಲಿ ನೆಲೆಗೊಂಡು ದೊಡ್ಡವನೆನಿಸಿಕೊಂಡ ಮನುಷ್ಯನು ಸಹಾ ತಪ್ಪು ಮಾಡಿಬಿಡಬಹುದು. ಹೊಸಒಡಂಬಡಿಕೆಯು ಅಬ್ರಹಾಮನನ್ನು ಕುರಿತು ನಂಬಿಕೆಯಿಂದ ರಕ್ಷಣೆ ಹೊಂದಿದವನು ಎಂದು ಹೇಳುವಾಗ ಕೃಪೆಯಿಂದಲೇ ರಕ್ಷಣೆ ಹೊಂದಿದನು ಎಂಬ ಅರ್ಥಕೊಡುತ್ತದೆ. ಒಂದುವೇಳೆ ಕೃಪೆಯಿಂದ ಆಗದಿದ್ದರೆ ನಮ್ಮಂತೆ ನಿರೀಕ್ಷೆ ಹೊಂದಿದವನಾಗುತ್ತಿರಲಿಲ್ಲ. ಯಾಕೆಂದರೆ ನಾವೂ ಸಹಾ ಆತನಂತೆಯೇ ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ.

ಹೇಗೆ ಒಬ್ಬ ನಂಬಿಗಸ್ತ ಕ್ರೈಸ್ತನೂ ಸಹಾ ಸನ್ಮಾರ್ಗವನ್ನು ಬಿಟ್ಟು ಕೆಟ್ಟ ಮಾರ್ಗಕ್ಕೆ ಜಾರಿಬಿಡುವುದು ಸುಲಭ ಎಂಬುದರ ಬಗ್ಗೆ ಈ ಕಥೆಯು ನಮಗೆ ಏನನ್ನು ಬೋಧಿಸುತ್ತದೆ? ಅವಿಧೇಯತೆಯು ಎಂದಿಗೂ ಉತ್ತಮವಾದ ಆಯ್ಕೆಯಲ್ಲ ಯಾಕೆ?

**ಮಂಗಳವಾರ** **ಮೇ 3**

## ಅಬ್ರಾಮ ಮತ್ತು ಲೋಟನು

ಆದಿಕಾಂಡ 13:1–18 ವಚನಗಳನ್ನು ಓದಿರಿ. ಒಬ್ಬ ಮನುಷ್ಯನಿಗೆ ಚಾರಿತ್ರ್ಯ ಎಂಬುದು ಬಹಳ ಮುಖ್ಯವೆಂಬುದನ್ನು ಈ ಕಥೆಯು ಏನನ್ನು ಬೋಧಿಸುತ್ತದೆ?

ಅಬ್ರಾಮನು ಮಾಡಿದ ಐಗುಪ್ತದ ಪ್ರವಾಸ ಕೇವಲ ದೌರ್ಭಾಗ್ಯಕರವಾದ ಅಲೆದಾಟವಾಗಿತ್ತು. ಆದ್ದರಿಂದ ಆತನು ಹಿಂದಿರುಗಿ ತಾನು ಮೊದಲಿದ್ದ ಸ್ಥಳಕ್ಕೆ ಬಂದನು. ಅಬ್ರಾಮನ ಜೊತೆ ದೇವರ ಚರಿತ್ರೆ ಮತ್ತೆ ಆರಂಭವಾಯ್ತು. ಆತನು ವಾಗ್ದತ್ತ ದೇಶಕ್ಕೆ ಮೊದಲು ಪ್ರವಾಸಿಯಾಗಿ ಬಂದಮೇಲೆ ಅದು ನಿಂತು ಹೋಗಿತ್ತು. ಅಬ್ರಾಮನು ಮೊತ್ತ ಮೊದಲಿಗೆ ತಂಗಿದ್ದ ಸ್ಥಳ ಬೆತೆಲ್ (ಆ.ಕಾಂಡ 13:3). ಈ ದೇಶಕ್ಕೆ ಮೊದಲ ಸಲ ಬಂದಾಗಲೂ ಇದೇ ಸ್ಥಳದಲ್ಲಿ ಇಳಿದುಕೊಂಡಿದ್ದನು (ಆ.ಕಾಂಡ 12:3–6). ಅಬ್ರಾಮನು ಪಶ್ಚಾತ್ತಾಪಗೊಂಡು ತನ್ನ ತನಕ್ಕೆ ಹಿಂದಿರುಗಿ ಬಂದನು. ಅಬ್ರಾಮನು ನಂಬಿಕೆಯ ಮನುಷ್ಯನಾದವನು.

ಅಬ್ರಾಮನು ಜನರೊಂದಿಗೆ ಸಂಬಂಧವಿಟ್ಟುಕೊಂಡಿದ್ದ ರೀತಿಯಲ್ಲಿಯೇ ಆತನು

ದೇವರೊಂದಿಗೆ ಮತ್ತೆ ಒಂದಾಗಿದ್ದಾನೆ ಎಂಬುದು ಗೊತ್ತಾಗುತ್ತಿತ್ತು. ತನ್ನ ಸೋದರ ಸಂಬಂಧಿಯಾದ ಲೋಟನ ಸಮಸ್ಯೆಯನ್ನು ಅಬ್ರಾಮನು ಆ ರೀತಿಯಾಗಿ ನಿರ್ವಹಿಸಿದನು. ಅಬ್ರಾಮನೇ ಲೋಟನ ಜೊತೆ ಶಾಂತಿಯುತವಾದ ಒಪ್ಪಂದಕ್ಕೆ ಪ್ರಸ್ತಾಪ ಮಾಡಿದವನಾಗಿದ್ದು ತನಗೆ ಬೇಕಾದ ಭೂಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅನುಮತಿಕೊಟ್ಟನು (ಆ.ಕಾಂಡ 13:9,10). ಆತನ ದಯೆ ಮತ್ತು ಉದಾರತೆಯ ಕೃತ್ಯವು ಆತನು ಎಂಥಾ ಕರುಣಾಮಯಿಯಾಗಿದ್ದನು ಎಂಬುದನ್ನು ಸೂಚಿಸುತ್ತಿತ್ತು.

ಲೋಟನು ಮುಂದೆ ತನ್ನ ನೆರೆಹೊರೆಯಾಗುವವರು ಎಂಥಾ ದುಷ್ಟರು ಎಂಬುದರ ಬಗ್ಗೆ ಚಿಂತಿಸದೆ (ಆ.ಕಾಂಡ 18:13) ಫಲವತ್ತಾದ ನೀರಿನ ಸಮೃದ್ಧಿಯಿರುವ ಉತ್ತಮವಾದ ಮತ್ತು ಕಷ್ಟವಿಲ್ಲದ ಸ್ಥಳವನ್ನು ಆಯ್ದುಕೊಂಡದ್ದರಲ್ಲಿ ಆತನ ದುರಾಸೆ ಮತ್ತು ಗುಣಸ್ವಭಾವವು ಎಂಥದ್ದೆಂದು ವ್ಯಕ್ತವಾಗಿದೆ (ಆ.ಕಾಂಡ 13:10,11). ಜಲಪ್ರಳಯ ಪೂರ್ವದಲ್ಲಿದ್ದ ದೇವಪುತ್ರರು ತಮಗಿಷ್ಟವಾದವರನ್ನು ಆಯ್ದುಕೊಂಡಂತೆ ಲೋಟನು ತನಗಿಷ್ಟವಾದ ಭೂಪ್ರದೇಶವನ್ನು ಆಯ್ಕೆ ಮಾಡಿಕೊಂಡನು (ಆ.ಕಾಂಡ 6:2).

ಇದಕ್ಕೆ ವ್ಯತಿರಿಕ್ತವಾಗಿ ಅಬ್ರಾಮನ ಚಲನೆ ನಂಬಿಕೆಯ ಕೆಲಸವಾಗಿತ್ತು. ಅಬ್ರಾಮನು ತನಗೆ ಬೇಕಾದ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಲಿಲ್ಲ. ಆದರೆ ಅದು ಆತನಿಗೆ ದೇವರ ಕೃಪೆಯಿಂದ ಕೊಡಲ್ಪಟ್ಟಿತು. ಅಬ್ರಾಮನು ಲೋಟನಂತೆ ನಡೆದುಕೊಳ್ಳಲಿಲ್ಲ. ಆತನು ದೇವರು ಕೊಟ್ಟ ಎಚ್ಚರಿಕೆಯ ಮಾತುಗಳ ಪ್ರಕಾರ ಭೂಮಿಯನ್ನು ಪರಿಗಣಿಸಿದನು (ಆ.ಕಾಂಡ 13:14). ಅಬ್ರಾಮನು ಲೋಟನಿಂದ ಪ್ರತ್ಯೇಕವಾದ ನಂತರವೇ ದೇವರು ಆತನೊಂದಿಗೆ ಮತ್ತೆ ಮಾತಾಡಿದನು (ಆ.ಕಾಂಡ 13:14). ಸತ್ಯಸಂಗತಿ ಏನೆಂದರೆ, ಸತ್ಯವೇದದಲ್ಲಿ ದೇವರು 'ಊರ್' ಎಂಬ ಸ್ಥಳದಲ್ಲಿ ಮಾತಾಡಿದ ನಂತರ ಮತ್ತೆ ಮೊದಲ ಬಾರಿಗೆ ಮಾತಾಡಿದುದು ಈಗಲೇ ಎಂದು ಬರೆಯಲ್ಪಟ್ಟಿದೆ. ನೀನಿರುವ ಸ್ಥಳದಿಂದ ದಕ್ಷಿಣೋತ್ತರ ಪೂರ್ವಪಶ್ಚಿಮಗಳಿಗೆ ಕಣ್ಣೆತ್ತಿ ನೋಡು ನೀನು ನೋಡುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತವಾಗಿ ಕೊಡುವೆನು ಎಂದು ದೇವರು ಅಬ್ರಾಮನಿಗೆ ನುಡಿದನು (ಆ.ಕಾಂಡ 13:14,15).

ನಂತರ ದೇವರು ಅಬ್ರಾಮನಿಗೆ ನೀನೆದ್ದು ಈ ದೇಶದಲ್ಲೆಲ್ಲಾ ತಿರುಗಾಡು ಇದನ್ನು ಸ್ವಾಧೀನ ಮಾಡಿಕೋ ಎಂದು ಆತನನ್ನು ಆಹ್ವಾನಿಸುತ್ತಾನೆ (ಆ.ಕಾಂಡ 13:17). ದೇವರು ಆ ದೇಶವನ್ನು ಅಬ್ರಾಮನಿಗೆ ಕೊಡುತ್ತಿರುವುದಾಗಿ ಬಹಳ ಸ್ಪಷ್ಟವಾಗಿ ಹೇಳುತ್ತಾನೆ. ಅದು ಆತನಿಗೆ ಒಂದು ಉಡುಗೊರೆಯಾಗಿ ಕೊಡಲ್ಪಟ್ಟಿತು, ಒಂದು ಕೃಪೆಯ ಉಡುಗೊರೆಯಾಗಿ ಕೊಡಲ್ಪಟ್ಟಿತು. ಅದನ್ನು ಅಬ್ರಾಮನು ನಂಬಿಕೆಯಿಂದ ಸ್ವಾಧೀನ ಮಾಡಿಕೊಳ್ಳಬೇಕಾಗಿತ್ತು. ವಿಧೇಯತೆಗೆ ನಡೆಸುವ ನಂಬಿಕೆಯಿಂದ ಹಾಗೆ ಮಾಡಬೇಕಾಗಿತ್ತು. ದೇವರು ತಾನು ಮಾಡಿದ ಕೆಲಸದಿಂದ ಮಾತ್ರವೇ ಅಬ್ರಾಮನಿಗೆ ಮಾಡಿದ ಎಲ್ಲಾ ವಾಗ್ದಾನಗಳು ನೆರವೇರಲು ಸಾಧ್ಯವಾಯಿತು (ಆ.ಕಾಂಡ 13:14–17 ವಚನಗಳನ್ನು ನೋಡಿರಿ).

ಇತರರು ನಮಗೆ ದಯೆ ತೋರಿಸುವವರಲ್ಲದಿರುವಾಗಲೂ ನಾವು ಅವರ ವಿಷಯದಲ್ಲಿ ಉದಾರವಾಗಿ ದಯೆಯಿಂದ ನಡೆದುಕೊಳ್ಳುವುದನ್ನು ಹೇಗೆ ಕಲಿಯಬಹುದು?

**ಬುಧವಾರ** **ಮೇ 4**

## ಬಾಬೆಲ್ ಜೊತೆ ಮೈತ್ರಿ

ಆದಿಕಾಂಡ 14:1–17 ವಚನಗಳನ್ನು ಓದಿರಿ. ವಾಗ್ದಾತ್ತ ದೇಶವನ್ನು ಉಡುಗೊರೆಯಾಗಿ ಕೊಟ್ಟ ಸ್ವಲ್ಪ ಕಾಲದಲ್ಲಿಯೇ ಸಂಭವಿಸಿದ ಈ ಯುದ್ಧದ ಮಹತ್ವವೇನು? ಅಬ್ರಾಮನ ಬಗ್ಗೆ ಈ ಕಥೆಯು ನಮಗೆ ಏನನ್ನು ಬೋಧಿಸುತ್ತದೆ?

ಇದು ಸತ್ಯವೇದದಲ್ಲಿ ವಿವರಿಸಿರುವ ಮೊದಲ ಯುದ್ಧ (ಆ.ಕಾಂಡ 14:2) ಮೆಸಪೊಟೋಮಿಯ ಮತ್ತು ಪಾರಸಿಯ ಮೈತ್ರಿಕೂಟದ ನಾಲ್ಕು ಸೈನ್ಯಗಳು ಸೊದೋಮ್ ಗೊಮೋರದ ಅರಸುಗಳನ್ನು ಒಳಗೊಂಡ ಕಾನಾನ್ಯರ ಮೈತ್ರಿಕೂಟದ ಐದು ಸೈನ್ಯಗಳಿಗೆ ವಿರೋಧವಾಗಿ ಬಂದರು (ಆ.ಕಾಂಡ 14:8) ಎಂಬುದು ಮಹಾ ಸಂಘರ್ಷವನ್ನು ಸೂಚಿಸುತ್ತದೆ (ಆ.ಕಾಂಡ 14:9). ಬ್ಯಾಬಿಲೋನಿಯಾದ ಆಧಿಪತ್ಯಕ್ಕೆ ಒಳಪಟ್ಟಿದ್ದ ಕಾನಾನ್ಯರು ಅದರ ವಿರುದ್ಧ ತಿರುಗಿಬಿದ್ದ ಕಾರಣ ಸೈನ್ಯಗಳು ಒಟ್ಟಾಗಿ ಸೇರಿಕೊಂಡು ಯುದ್ಧ ಮಾಡುವುದಾಗಿತ್ತು (ಆ.ಕಾಂಡ 14:4,5). ಈ ಕಥೆಯು ಚಾರಿತ್ರಿಕ ಘರ್ಷಣೆ (ಕಲಹ)ಗೆ ಸಂಬಂಧಿಸಿದೆಯಾದರೂ ಈ ಜಾಗತಿಕ

ಮಟ್ಟದ ಯುದ್ಧವು ಅಬ್ರಾಮನಿಗೆ ಈ ದೇಶವನ್ನು ವಾಗ್ದಾನವಾಗಿ ಕೊಟ್ಟ ಮೇಲೆ ನಡೆಯಿತೆಂಬುದು ಇದಕ್ಕೆ ಆತ್ಮೀಕ ಮಹತ್ವವನ್ನು ನೀಡುತ್ತದೆ.

ಈ ಸಂಘರ್ಷದಲ್ಲಿ ಕಾನಾನ್ ದೇಶದ ಬಹಳಷ್ಟು ಜನಾಂಗಗಳ ತೊಡಗಿಸಿ–ಕೊಂಡಿರುವುದು ಇದಕ್ಕೆ ಮುಖ್ಯವಾದ ಕಾರಣ ಆ ದೇಶದ ಮೇಲೆ ಪ್ರಭುತ್ವ ಹೊಂದುವುದೇ ಆಗಿದೆ. ಈ ದೇಶದ ನಿಜವಾದ ಯಜಮಾನ ಅಬ್ರಾಮನೇ ಆಗಿದ್ದರೂ ಈವಾಗ ನಡೆಯುತ್ತಿರುವ ಸಂಘರ್ಷದಿಂದ ಅಬ್ರಾಮನು ಆರಂಭದಲ್ಲಿ–ಯಾದರೂ ಹೊರಗುಳಿದುದು ಒಂದು ವಿಪರ್ಯಾಸವೆಂದೇ ಹೇಳಬೇಕು. ವಾಗ್ದತ್ತ ದೇಶವನ್ನು ಅಬ್ರಾಮನು ಸೇನೆಯ ಬಲದಿಂದಾಗಲೀ ರಾಜಕೀಯ ಕಾರ್ಯತಂತ್ರಗಳ ವಿವೇಕದಿಂದಾಗಲೀ ಸ್ವಾಧೀನಪಡಿಸಿಕೊಂಡಿಲ್ಲವಾದುದರಿಂದ ಆತನು ಯಾವ ಪಕ್ಷವನ್ನೂ ವಹಿಸದೇ ತಟಸ್ಥನಾಗಿ ಉಳಿಯುತ್ತಾನೆ.

ಈ ಕಲಹದಲ್ಲಿ ತನ್ನ ತಮ್ಮನ ಮಗನಾದ ಲೋಟನನ್ನು ಸೆರೆಹಿಡಿದುಕೊಂಡು ಹೋಗಿದ್ದುದರಿಂದ ಅಬ್ರಾಮನು ಮಧ್ಯೆ ಬರಬೇಕಾಯ್ತು (ಆ.ಕಾಂಡ 14:12,13).

"ಅಬ್ರಾಮನು ಮಮ್ರೆತೋಪಿನಲ್ಲಿ ಶಾಂತಿ ಸಮಾಧಾನದಿಂದ ನೆಲೆಸಿರುವಾಗ ತಪ್ಪಿಸಿಕೊಂಡು ಬಂದ ಮನುಷ್ಯನೊಬ್ಬನಿಂದ ಯುದ್ಧದ ಬಗ್ಗೆ ಮತ್ತು ಅವನ ಸೋದರ ಸಂಬಂಧಿ ಲೋಟನಿಗೆ ಒದಗಿರುವ ಆಪತ್ತಿನ ಬಗ್ಗೆ ತಿಳಿದುಕೊಂಡನು. ಲೋಟನು ತೋರಿದ ಕೃತಘ್ನತೆಯನ್ನು ಆತನು ಎಂದಿಗೂ ಹೃದಯದಲ್ಲಿಟ್ಟು–ಕೊಂಡಿರಲಿಲ್ಲ. ಅವನಿಗೆ ಲೋಟನ ಮೇಲಿದ್ದ ಮಮತೆ ಜಾಗೃತವಾಯ್ತು, ಅವನು ಲೋಟನನ್ನು ಬಿಡಿಸಿಕೊಂಡು ಬರಬೇಕೆಂದು ದೃಢಮಾಡಿಕೊಂಡನು. ಎಲ್ಲದಕ್ಕೂ ಮುಂಚೆ ದೇವರ ಸಲಹೆಯನ್ನು ಕೋರುವವನಾಗಿ ಅಬ್ರಹಾಮನು ಯುದ್ಧಕ್ಕೆ ಸಿದ್ಧಪಡಿಸಿಕೊಂಡನು" ಶ್ರೀಮತಿ ಎಲೆನ್ ಜಿ ವೈಟಮ್ಮನವರ **ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು** ಪುಸ್ತಕದಲ್ಲಿ 13ನೇ ಪುಟ.

ಆದರೆ ಅಬ್ರಾಮನು ಇಡೀ ಮೈತ್ರಿಕೂಟದ ಮೇಲೆ ಎದುರು ಬೀಳಲಿಲ್ಲ. ರಾತ್ರಿಯ ವೇಳೆ ಕ್ಷಿಪ್ರವಾಗಿ ಕಾರ್ಯಸಾಧಿಸುವ ಸೇನಾಪಡೆ ಏನು ಮಾಡಬಹುದಾಗಿತ್ತೋ ಹಾಗೆಯೇ ಅಬ್ರಾಮನು ಲೋಟನನ್ನು ಸೆರೆಯಾಗಿ ಇಟ್ಟುಕೊಂಡಿದ್ದ ಪಾಳೆಯದ ಮೇಲೆ ಮಾತ್ರ ಆಕ್ರಮಣ ಮಾಡಿದನು. ಲೋಟನನ್ನು ಕಾಪಾಡಿದನು. ಹಾಗಾಗಿ ದೇವರಿಗೆ ನಂಬಿಗಸ್ತನಾಗಿದ್ದ ಅಬ್ರಾಮನು ಮಹಾಧೈರ್ಯ ಸಾಹಸವನ್ನು ಸಹಾ

ಮರೆದನು. ಖಂಡಿತವಾಗಿಯೂ ಆ ಪ್ರಾಂತ್ಯದಲ್ಲಿ ಅಬ್ರಾಮನ ಪ್ರಭಾವವು ಹೆಚ್ಚಾಯಿತು ಮತ್ತು ಜನರು ಅವನು ಎಂಥಾ ಮನುಷ್ಯನು ಎಂದು ಕಂಡುಕೊಂಡರು ಹಾಗು ಆತನು ಸೇವಿಸುತ್ತಿದ್ದ ದೇವರ ಬಗ್ಗೆ ಹೆಚ್ಚಾಗಿ ತಿಳಿದುಕೊಂಡರು.

ನಮ್ಮ ಕ್ರಿಯೆಗಳು ಇತರರ ಮೇಲೆ ಯಾವ ತೆರನಾದ ಪ್ರಭಾವವನ್ನು ಬೀರುತ್ತವೆ? ನಮ್ಮ ಕ್ರಿಯೆಗಳಿಂದ ನಮ್ಮ ನಂಬಿಕೆಯ ಬಗ್ಗೆ ಯಾವ ತೆರನಾದ ಸಂದೇಶಗಳನ್ನು ಕೊಡುತ್ತಿದ್ದೇವೆ?

**ಗುರುವಾರ** **ಮೇ 5**

## ಮೆಲ್ಕೀಚೆದೆಕನ ದಶಾಂಶ

ಆದಿಕಾಂಡ 14:18–24 ಮತ್ತು ಇಬ್ರಿಯ 7:1–10 ವಚನಗಳನ್ನು ಓದಿರಿ. ಮೆಲ್ಕೀಚೆದಕನು ಯಾರು? ಇದಕ್ಕಿದ್ದ ಹಾಗೆ ಎಲ್ಲಿಂದಲೋ ಪ್ರತ್ಯಕ್ಷನಾದ ಈ ಯಾಜಕನಿಗೆ ಅಬ್ರಾಮನು ಯಾಕೆ ತನ್ನ ದಶಾಂಶಗಳನ್ನು ಕೊಟ್ಟನು?

ಯಾವುದೋ ಒಂದು ಸ್ಥಳದಿಂದ ಮೆಲ್ಕೀಚೆದಕನು ಇದ್ದಕ್ಕಿದ್ದ ಹಾಗೆ ರಹಸ್ಯವಾಗಿ ಪ್ರತ್ಯಕ್ಷನಾಗಲಿಲ್ಲ. ಕಾನಾನ್ಯದ ಅರಸರು ಅಬ್ರಾಮನಿಗೆ ತಮ್ಮ ಕೃತಜ್ಞತೆ ತೋರಿಸಿದ ಮೇಲೆ ಅಬ್ರಾಮನು ಈವಾಗ ಈ ಯಾಜಕನಿಗೆ ದಶಾಂಶ ಕೊಡುವುದರ ಮೂಲಕ ತನ್ನ ಕೃತಜ್ಞತೆಯನ್ನು ತೋರಿಸುತ್ತಾನೆ.

ಮೆಲ್ಕೀಚೆದಕನು ಸಾಲೇಮ್ ಪಟ್ಟಣದಿಂದ ಬಂದವನಾಗಿದ್ದಾನೆ ಸಾಲೇಮ್ ಎಂದರೆ ಸಮಾಧಾನ ಯುದ್ಧದ ಬಳಿಕ ಸಮಾಧಾನವು ಒಂದು ಸಮರ್ಪಕವಾದ ಸಂದೇಶವನ್ನು ಕೊಡುತ್ತದೆ.

ಮೆಲ್ಕಿಜೆದೇಕ ಎಂಬ ಹೆಸರಿನ ಉತ್ತರಭಾಗ ಜೆದೆಕ್–ನ್ಯಾಯ ಎಂಬುದಕ್ಕೆ ಸೊದೋಮಿನ ಅರಸನ ಹೆಸರು ಬೇರ (ಕೆಟ್ಟದರಲ್ಲಿ) ಮತ್ತು ಗೊಮೋರ ಅರಸನ ಹೆಸರು ಬಿರ್ಷಾ (ದುಷ್ಟತನದಲ್ಲಿ) ಎಂಬುವು ವಿರುದ್ಧಾರ್ಥ ಹೊಂದಿವೆ. ಇವುಗಳು ಪ್ರಾಯಶಃ ಅವರ ಗುಣಗಳನ್ನು ಪ್ರತಿನಿಧಿಸುವ ಮನೆತನದ ಹೆಸರುಗಳಾಗಿವೆ (ಆ.ಕಾಂಡ 14:2).

ಕಾನಾನ್ ದೇಶದ ಇತರೆ ಅರಸರ ದೆಸೆಯಿಂದ ಹಿಂಸೆ ಮತ್ತು ದುಷ್ಟತನಗಳು ಮರುಕಳಿಸಿದ ಮೇಲೆ ಮೆಲ್ಕೀಚೆದಕನು ಕಾಣಿಸಿಕೊಳ್ಳುತ್ತಾನೆ. ಸತ್ಯವೇದದಲ್ಲಿ ಯಾಜಕ

ಎಂಬ ಪದದ ಮೊದಲ ಉಲ್ಲೇಖವನ್ನು ಸಹಾ ಈ ವಚನವೃಂದವು ಹೊಂದಿದೆ (ಆ.ಕಾಂಡ 14:18). ಮೆಲ್ಕೀಚೆದೆಕನಂತೆಯೇ ಅಬ್ರಾಮನೂ ಸಹಾ ಪರಾತ್ಪರ ದೇವರನ್ನು ಸೇವಿಸುತ್ತಿದ್ದನು. ಆದುದರಿಂದ ಅಬ್ರಾಮನು ಮೆಲ್ಕೀಚೆದೆಕನನ್ನು ದೇವರ ಯಾಜಕನ್ನಾಗಿ ಕಂಡನು ಎಂಬುದನ್ನು ಸೂಚಿಸುತ್ತದೆ. ಆದರೆ ಮೆಲ್ಕೀಜೆದೆಕನನ್ನು ಕ್ರಿಸ್ತನನ್ನಾಗಿ ಗುರುತಿಸಬಾರದು. ಆತನು ತನ್ನ ಕಾಲದ ಜನರಿಗೆ ದೇವರ ಪ್ರತಿನಿಧಿಯಾಗಿದ್ದನು (ಎಲೆನ್ ಜಿ ವೈಟಮ್ಮನವರಿಗೆ ಎಸ್.ಡಿ.ಎ. ಬೈಬಲ್ ಕಾಮೆಂಟರಿ 1ನೇ ಸಂಪುಟದಲ್ಲಿ ಪುಟ 1092 ಮತ್ತು 1092.

ಮೆಲ್ಕೀಚೆದೆಕನು ಯಾಜಕನಾಗಿ ದೇವರನ್ನು ಸೇವಿಸುತ್ತಿದ್ದನು. ಆತನು ರೊಟ್ಟಿಯನ್ನೂ ದ್ರಾಕ್ಷಾರಸವನ್ನು ಕೊಟ್ಟನು. ಆತನು ಆಗತಾನೆ ದ್ರಾಕ್ಷಾಫಲದಿಂದ ಮಾಡಿದ ರಸವನ್ನು ಕೊಟ್ಟನೆಂಬುದಾಗಿ ಇದು ನಮಗೆ ತಿಳಿಸುತ್ತದೆ (ಧ.ಕಾಂಡ 7:13, 2 ಪೂ.ವೃ. 31:5) ಅಬ್ರಾಮನು ಆತನಿಗೆ ದಶಾಂಶವನ್ನು ಕೊಟ್ಟ ಸಂದರ್ಭದಲ್ಲಿ ಈ ವಿಷಯವು ಪ್ರಸ್ತಾಪವಾಗಿದೆ (ಧ.ಕಾಂಡ 14:23). ಮಾತ್ರವಲ್ಲದೆ ಆತನು ಅಬ್ರಾಮನನ್ನು ಆಶೀರ್ವದಿಸಿದನು (ಆ.ಕಾಂಡ 14:19).

ಇಷ್ಟರಲ್ಲಿ ಅಬ್ರಾಮನು ಭೂಮ್ಯಾಕಾಶಗಳ ಒಡೆಯನೂ ಸೃಷ್ಟಿಕರ್ತನೂ ಆದ ದೇವರಿಗೆ ಕೃತಜ್ಞತೆಯನ್ನು ತೋರುವ ಸಲುವಾಗಿ ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಮೆಲ್ಕೀಚೆದೆಕನಿಗೆ ಕೊಟ್ಟನು (ಆ.ಕಾಂಡ 14:19). ದೇವರಿಗಿರುವ ಈ ಬಿರುದು ಸೃಷ್ಟಿಯ ಕಥೆಯನ್ನು ಮತ್ತೆ ಜ್ಞಾಪಕಕ್ಕೆ ತರುತ್ತದೆ (ಆ.ಕಾಂಡ 1:1). ಇಲ್ಲಿರುವ ಭೂಮ್ಯಾಕಾಶಗಳು ಎಂಬ ಪದವೃಂದವು ಸರ್ವವನ್ನು ಅಥವಾ ಸಮಗ್ರವನ್ನು ಒಳಗೊಂಡಿದೆ. ಹಾಗಾಗಿ, ದಶಾಂಶ ಎಂಬುದು ಸರ್ವಕ್ಕೂ ಒಡೆಯನಾದ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಎಂಬ ತಿಳುವಳಿಕೆಯನ್ನು ಕೊಡುತ್ತದೆ (ಇಬ್ರಿಯ 7:2–6 ಇದನ್ನು ಆ.ಕಾಂಡ 28:22ಕ್ಕೆ ಹೋಲಿಸಿರಿ). ವಿಪರ್ಯಾಸವೇನೆಂದರೆ ಭಕ್ತರು ದಶಾಂಶವನ್ನು ದೇವರಿಗೆ ಸಲ್ಲಿಸುವ ಕಾಣಿಕೆ ಎಂದು ತಿಳಿಯುವ ಬದಲು ನಮ್ಮ ಜೀವನದ ಆರಂಭಕ್ಕೆ ಅಗತ್ಯವಾದುದನ್ನೆಲ್ಲಾ ದೇವರೇ ಕೊಡುವುದರಿಂದ ಇದು ದೇವರಿಂದ ತಮಗೆ ಸಿಕ್ಕಿದ ಬಹುಮಾನವೆಂದು ಎಣಿಸುತ್ತಾರೆ. ದಶಮಾಂಶ ಭಾಗವನ್ನು ದೇವರಿಗೆ ಹಿಂದಿರುಗಿಸುವ ಕೆಲಸವು ನಮ್ಮ ನಂಬಿಕೆಯ ಬಲವಾದ ಸೂಚಕವಾಗಿದೆ ಮತ್ತು ನಂಬಿಕೆಯನ್ನು ಹೆಚ್ಚಿಸುವ ಮಹಾಕಾರ್ಯವಾಗಿದೆ ಏಕೆ?

**ಶುಕ್ರವಾರ** **ಮೇ 6**

**ಹೆಚ್ಚಿನ ಚಿಂತನೆ :** ಶ್ರೀಮತಿ ಎಲೆನ್ ಜಿ ವೈಟಮ್ಮನವರ "ಪೂರ್ವಿಕರು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ 'ಕಾನಾನಿನಲ್ಲಿ ಅಬ್ರಹಾಮನು' ಪುಟ 134, 135ನ್ನು ಓದಿರಿ.

ಯೇಸುಕ್ರಿಸ್ತನ ಸಭೆಯು ಆಶೀರ್ವಾದದಾಯಕವಾಗಿರಬೇಕು ಮತ್ತು ಅದರ ಸಭಿಕರು ಮತ್ತೊಬ್ಬರನ್ನು ಆಶೀರ್ವದಿಸುವಾಗ ಅವರೂ ಸಹಾ ಆಶೀರ್ವಾದಗಳನ್ನು ಹೊಂದಿಕೊಳ್ಳಬೇಕು. ದೇವರು ಸಮಸ್ತ ಲೋಕದಲ್ಲಿ ಒಂದು ಜನಾಂಗವನ್ನು ಆಯ್ದುಕೊಳ್ಳುವ ಉದ್ದೇಶವು ಕೇವಲ ಅವರನ್ನು ತನಗೆ ಪುತ್ರ ಪುತ್ರಿಯರನ್ನಾಗಿ ಮಾಡಿಕೊಳ್ಳುವುದು ಮಾತ್ರವಲ್ಲ ಆದರೆ ಅವರ ಮುಖಾಂತರ ದೈವೀಕ ಬೆಳಕನ್ನು ಸಮಸ್ತ ಜನರಿಗೆ ಅನುಗ್ರಹಿಸುವ ಸಲುವಾಗಿ ಅವರನ್ನು ಆಯ್ದುಕೊಳ್ಳುತ್ತಾನೆ. ಹಾಗೆಯೇ ದೇವರು ಅಬ್ರಹಾಮನನ್ನು ತನಗೆ ಸ್ನೇಹಿತನಾಗಿರಲು ಮಾತ್ರವಲ್ಲ ಆದರೆ ತನ್ನ ವಿಶೇಷವಾದ ಆಶೀರ್ವಾದಗಳನ್ನು ಎಲ್ಲಾ ಜನರಿಗೂ ಅನುಗ್ರಹ ಮಾಡಲು ಅನುಕೂಲವಾದ ಮಾಧ್ಯಮವನ್ನಾಗಿ ಆತನನ್ನು ಆರಿಸಿಕೊಂಡನು. ತನ್ನ ಸುತ್ತುಮುತ್ತಲಿನ ಜನರ ನೈತಿಕ ಅಂಧಕಾರದ ನಡುವೆ ಬೆಳಕಾಗಿರಲೆಂದು ಆತನನ್ನು ಆರಿಸಿಕೊಂಡನು.

ದೇವರು ತನ್ನ ಮಕ್ಕಳನ್ನು ಸತ್ಯದ ಬೆಳಕಿನಿಂದ ಆಶೀರ್ವದಿಸುವಾಗಲೆಲ್ಲಾ ಅವರು ನಿತ್ಯಜೀವದ ವರವನ್ನು ಹೊಂದಿಕೊಳ್ಳಬೇಕೆಂಬುದು ಮಾತ್ರವಲ್ಲ ಆದರೆ ಅವರೊಂದಿಗಿರುವ ಇತರರೂ ಸಹಾ ಆತ್ಮೀಕವಾಗಿ ಜ್ಞಾನೋದಯ ಹೊಂದಬೇಕೆಂದು ಆಶಿಸುತ್ತಾನೆ. ನೀವು ಲೋಕಕ್ಕೆ ಉಪ್ಪಾಗಿದ್ದೀರಿ ಎಂದು ತನ್ನ ಮಕ್ಕಳನ್ನು ಲೋಕಕ್ಕೆ ಉಪ್ಪನ್ನಾಗಿ ಮಾಡಿರುವುದು ತಾವು ಮಾತ್ರ ಕೆಡಬಾರದು ಎಂತಲ್ಲ. ಆದರೆ ಇತರರನ್ನು ಕೆಡಬಾರದಂತೆ ಮಾಡುವ ಕಾರ್ಯಕರ್ತರಾಗಿರಬೇಕೆಂಬ ಉದ್ದೇಶ ಹೊಂದಿದ್ದಾನೆ.

ನೀವು ದೇವರ ಕಟ್ಟಡದಲ್ಲಿ ಜೀವವುಳ್ಳ ಕಲ್ಲುಗಳಾಗಿ ಪ್ರಕಾಶಿಸುವಿರಾ? ನಮ್ಮ ಎಲ್ಲಾ ವ್ಯವಹಾರಗಳ ಮೇಲೆ ನಮ್ಮ ಧರ್ಮವು ಪ್ರಭಾವಯುತ ನಿಯಂತ್ರಣವನ್ನು ಬೀರದೆ ಹೋದರೆ ಅದು ಶುದ್ಧವಾದ ಧರ್ಮವಾಗಿರುವುದಿಲ್ಲ. ನಮ್ಮ ಜೀವನದ ಪರ್ಯಂತ ನಾವು ಮಾಡುವ ಕೆಲಸವು ಉಳಿಯುವಂತಾಗಬೇಕಾದರೆ ನಮ್ಮಲ್ಲಿ ನಿಜವಾದ ಭಕ್ತಿಯಿರಬೇಕು. ನಮ್ಮ ಹೃದಯದಲ್ಲಿ ನಮ್ಮನ್ನು ಪರಿವರ್ತಿಸುವ

ಯೇಸುವಿನ ಕೃಪೆಯನ್ನು ಹೊಂದಿರಬೇಕು. ನಾವು ಬಹಳವಾಗಿ ನಮ್ಮನ್ನು ಕಡಿಮೆ ಮಾಡಿಕೊಳ್ಳಬೇಕು ಮತ್ತು ಬಹಳವಾಗಿ ಯೇಸುವನ್ನು ಹೆಚ್ಚು ಮಾಡಿಕೊಳ್ಳಬೇಕು– ಶ್ರೀಮತಿ ಎಲೆನ್ ಜಿ ವೈಟಮ್ಮನವರ '*Reflecting Christ*' ಪುಟ 205.

## ಚರ್ಚಿಸಬೇಕಾದ ಪ್ರಶ್ನೆಗಳು

1. ಅಬ್ರಾಮನನ್ನು ಆಶೀರ್ವದಿಸುವ ಸನ್ನಿವೇಶದಲ್ಲಿ ದೇವರು ಅವನಿಗೆ "ನಾನು ನಿನ್ನನ್ನು ಆಶೀರ್ವದಿಸುತ್ತೇನೆ.... ನೀನು ಆಶೀರ್ವಾದ ನಿಧಿಯಾಗುವೆ" ಎನ್ನುತ್ತಾನೆ (ಆ.ಕಾಂಡ 12:2). ಆಶೀರ್ವಾದ ನಿಧಿಯಾಗಿರುವುದು ಎಂದರೇನು? ಅಬ್ರಾಮನಂತೆಯೇ ಅದೇ ದೇವರನ್ನು ಸೇವಿಸುವ ನಾವು ಇತರರಿಗೆ ಆಶೀರ್ವಾದ ನಿಧಿಯಾಗುವುದು ಹೇಗೆ?

2. ತನ್ನ ಹೆಂಡತಿಯ ವಿಷಯದಲ್ಲಿ ಅಬ್ರಾಮನು ಹೇಳಿದ ಅರ್ಧ ಸುಳ್ಳು ಯಾವುದು? ಪೂರ್ಣವಾಗಿ ಸುಳ್ಳು ಹೇಳದಿದ್ದರೂ ಅಥವಾ ಸತ್ಯ ಹೇಳದಿದ್ದರೂ ಇದು ತಾಂತ್ರಿಕವಾಗಿ ಸಂಪೂರ್ಣ ಸುಳ್ಳೇ ಆಗಿರುತ್ತದೆ, ಇದು ಎಷ್ಟು ಕೆಟ್ಟದ್ದಾಗಿದೆ?

3. ಆದಿಕಾಂಡ 14:21–23 ವಚನಗಳಲ್ಲಿ ಸೊದೋಮಿನ ಅರಸನು ಕೊಟ್ಟ ಅವಕಾಶಕ್ಕೆ ಅಬ್ರಾಮನು ಸ್ಪಂದಿಸುತ್ತಾನೆ. ಅಬ್ರಾಮನು ಹಾಗೇಕೆ ಸ್ಪಂದಿಸಿದನು? ಈ ಕಥೆಯಿಂದ ನಾವು ಮುಖ್ಯವಾಗಿ ಯಾವ ಪಾಠವನ್ನು ಕಲಿಯುತ್ತೇವೆ? ರಾಜನು ಕೊಟ್ಟ ಅವಕಾಶವನ್ನು ಅಬ್ರಾಮನು ಸ್ವೀಕರಿಸದಿದ್ದರೆ ಅದನ್ನು ಆತನು ಸಮರ್ಥಿಸಿಕೊಳ್ಳಬಹುದಾಗಿತ್ತೆ?